ಶ್ರೀ ರಾಮಚಂದ್ರ ಮಿಷನ್®

ECHOES ಇಂಡಿಯಾ ವಾರ್ತಾಪತ್ರ

# ಗುರುಗಳ ಸಮಾಚಾರ



## ಮೋಪೆಲಿಯೆ, ಫ್ರಾನ್ಸ್ – ಜನವರಿ 7, 2015

ಜನವರಿ 1 ರಂದು ದೊರೆತ ಸುದ್ದಿ ಸ್ವಲ್ಪ ಅನಿರೀಕ್ಷಿತವಾಗಿದ್ದುದರಿಂದ, ಗುರುಗಳನ್ನು ಸ್ವಾಗತಿಸಲು ಸ್ಥಳೀಯ ಅಭ್ಯಾಸಿಗಳು ತಮ್ಮಿಂದ ಸಾಧ್ಯವಾದಷ್ಟು ಸಹೋದರ ಸಹೋದರಿಯರನ್ನು ಒಟ್ಟುಗೂಡಿಸಿದ್ದರು. ಇಪ್ಪತ್ನಾಲ್ಕು ಗಂಟೆಗಳ ನಂತರ, ಫ್ರಾನ್ಸ್ ಹಾಗು ಅದರ ನೆರೆಯ ರಾಷ್ಟ್ರಗಳೆಲ್ಲೆಡೆಯಿಂದ ತಮ್ಮ ಕುಟುಂಬಗಳೊಂದಿಗೆ ಬಂದಿದ್ದ 800 ಅಭ್ಯಾಸಿಗಳಿಗಾಗಿ ಸ್ಥಳವೊಂದನ್ನು ನಿಶ್ಚಯಿಸಲಾಯಿತು.

ಬೆಳಗ್ಗೆ 7:30ಕ್ಕೆ, ಬಹಳ ಪ್ರಾರ್ಥನಾಪೂರ್ಣವಾಗಿದ್ದ ವಾತಾವರಣದಲ್ಲಿ ಕಮಲೇಶ್‌ಜಿಯವರು ಮೊದಲನೆಯ ಸತ್ಸಂಗವನ್ನು ನಡೆಸಿಕೊಟ್ಟರು. ನಾವು ನಡೆಯ ಬೇಕಾದ ದಾರಿಯನ್ನು ಹಾಕಿಕೊಟ್ಟ ಅವರು ಹೀಗೆ ಹೇಳಿದರು:

"...ಹಾಗಾಗಿ, ದಯವಿಟ್ಟು ನಿಮ್ಮ ಭಾವನೆಗಳನ್ನು ತಡೆಹಿಡಿಯ ಬೇಡಿ. ಗುರುಗಳ ನೆನಪಾದಾಗ ಆ ಕ್ಷಣದಲ್ಲಿ ನಿಮಗೆ ಆನಂದವೆನಿಸಿದರೆ ಆನಂದ ಪಡಿ, ಅವರ ಅನುಪಸ್ಥಿತಿಯಿಂದ ಖೇದವೆನಿಸಿದರೆ ಕಣ್ಣೀರು ಸುರಿಸಿರಿ ಪರವಾಗಿಲ್ಲ. ಮೌನವಾದ ಹೃದಯದೊಂದಿಗೆ, ಕೃತಜ್ಞತಾಪೂರ್ಣ ಹೃದಯದೊಂದಿಗೆ, ಮುಗುಳುನಗೆಯ ಹೃದಯದೊಂದಿಗೆ ನಾವು ಯಾವಾಗಲೂ ಗುರುಗಳ ಸ್ಮರಣೆಯಲ್ಲಿರಬಹುದು. ಅವರೀಗ ನಮ್ಮಲ್ಲಿ ಲೀನರಾಗಿಹೋಗಿದ್ದು ನಮಗೆ ಸುಲಭವಾಗಿ ದೊರೆಯುತ್ತಾರೆ. ಈಗ, ನಮ್ಮನ್ನು ಅವರಲ್ಲಿ ಲಯಗೊಳಿಸುವುದು ಹೇಗೆ ಎಂಬುದೇ ನಮ್ಮ ಸಾಧನೆ. ಇದು ನಮ್ಮ ಕೈಯಲ್ಲೇ ಇದ್ದು, ಆ ಲಯದ ಸ್ಥಿತಿಯನ್ನು ಆದಷ್ಟು ಬೇಗ ನಾವು ಸಾಧಿಸುವಂತಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಇದನ್ನೇ ಬಾಬೂಜಿ ಮಹಾರಾಜರು ಬಯಸುವುದು, ಇದನ್ನೇ ಗುರುಗಳು ಬಯಸುವುದು, ಇದನ್ನೇ ಗುರು ಪರಂಪರೆಯು ಬಯಸುವುದು – ಅವರ ಜಾಗತಿಕ ಉಪಸ್ಥಿತಿಯಲ್ಲಿ ಸಂಪೂರ್ಣವಾಗಿ ಲೀನವಾಗಿ ಹೋಗುವುದು ಮತ್ತು ಇದನ್ನೇ ನಾವು ಪರಮ ಮೂಲದೊಂದಿಗೆ ಲಯವಾಗುವುದು ಎನ್ನುತ್ತೇವೆ. ಪ್ರಾರ್ಥನೆಗಳೊಂದಿಗೆ, ಎಲ್ಲರಿಗೂ ಧನ್ಯವಾದಗಳು."

ಇಷ್ಟು ಕಡಿಮೆ ಕಾಲಾವಕಾಶದಲ್ಲಿ ಅಷ್ಟೊಂದು ಅಭ್ಯಾಸಿಗಳು ಬಂದಿರುವುದು ತಮ್ಮ ಮನಕಲಕಿದೆ ಎಂದು ಕೂಡ ಅವರು ಹೇಳಿದರು. ಅವರಿಂದ ದೊರೆತ ಅದ್ಭುತ ದಿನದಿಂದ ನಾವೆಲ್ಲ ಅತೀವ ಸಂತೋಷ ಹಾಗು ಕೃತಜ್ಞತೆಯೊಂದಿಗೆ ಮರಳಿದೆವು ಮತ್ತು ಅವರೂ ಸಹ ಅವರೊಂದಿಗೆ ದಿನ ಕಳೆಯಲು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿದ ನಮ್ಮೆಲ್ಲರಿಗೂ ಧನ್ಯವಾದವನ್ನು ಅರ್ಪಿಸಿದರು!

## ಸಂಪಾದಕರ ನುಡಿ

ನಮ್ಮ ಪ್ರಿಯ ಗುರುಗಳಾದ ಪೂಜ್ಯ ಚಾರೀಜಿಯವರ ದೇಹತ್ಯಾಗದಿಂದ ಚೇತರಿಸಿಕೊಳ್ಳುತ್ತಿರುವಾಗಲೇ ಅವರ ಉತ್ತರಾಧಿಕಾರಿಯಾದ ಆದರಣೀಯ ಶ್ರೀ ಕಮಲೇಶ್‌ಜಿಯವರನ್ನು ಅರಿತು ಕೊಳ್ಳುವ ಪ್ರಕ್ರಿಯೆಯಲ್ಲಿ ಸಹ ನಾವಿದ್ದೇವೆ. ತಾನು ಕಾರ್ಯಪ್ರವೃತ್ತನಾಗುವುದರಲ್ಲಿ ಹಾಗು ಅಭ್ಯಾಸಿಗಳು ಅವರ ಹತ್ತಿರ ಹೋಗುವುದರಲ್ಲಿ ಮತ್ತು ತಮ್ಮ ಸಾಧನೆಗೆ ಒತ್ತು ಕೊಡುತ್ತಾ ಮಿಷನ್ನಿಗಾಗಿ ಕೆಲಸ ಮಾಡುವ ವಿಷಯದಲ್ಲಿ ಬದಲಾವಣೆಗಳನ್ನು ತರುವಲ್ಲಿ ಅವರು ಯಾವುದೇ ಸಮಯವನ್ನು ವ್ಯರ್ಥಮಾಡಿಲ್ಲ. ಸಹಜ ಸಂದೇಶದ ಮೂಲಕ ನಮಗೆ ದೊರೆಯುತ್ತಿರುವ ಅವರ ಸಂದೇಶಗಳು ಸಾಂತ್ವನಕಾರಿಯಾಗಿದ್ದು ಮಿಷನ್ನಿನ ಭವಿಷ್ಯದ ಕುರುತಾಗಿ ಅವರ ದೃಷ್ಟಿಕೋನದ ಮಿಂಚುನೋಟವನ್ನು ಒದಗಿಸುತ್ತದೆ. ಫ್ರಾನ್ಸ್ ದೇಶದ ಭೇಟಿ ಹಾಗು ನ್ಯೂಜೆರ್ಸಿಯಲ್ಲಿ ನಡೆದ ಸಭೆಗಳು ಈಗಾಗಲೇ ಮಿಷನ್ನಿನ ಚಟುವಟಿಕೆಗಳಲ್ಲಿ ಅನೇಕ ಬದಲಾವಣೆಗಳನ್ನು ತಂದಿದೆ. ಅವರ ಈ ಪ್ರವಾಸ ಹಾಗು ನ್ಯೂಜೆರ್ಸಿಯಲ್ಲಿ ನೀಡಿದ ಭಾಷಣಗಳ ಮುಖ್ಯಾಂಶಗಳನ್ನು ಈ ಸಂಚಿಕೆಯಲ್ಲಿ ನಿಮಗಾಗಿ ಹೊರತಂದಿದ್ದೇವೆ.



ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ

**ಓರ್ವನ ಮಗ್ನತೆಯನ್ನು ಗಾಢಗೊಳಿಸಲು ಪ್ರಾರ್ಥನಾಮಯ ಸೂಚನೆಗಳು**

- 9 ಗಂಟೆಯ ವಿಶ್ವಪ್ರಾರ್ಥನೆ – ವಿಶ್ವದಾದ್ಯಂತ ಎಲ್ಲ ಸಹೋದರ ಸಹೋದರಿಯರಲ್ಲಿ ಪ್ರೇಮ ಹಾಗು ಭಕ್ತಿಗಳು ತುಂಬಿಕೊಳ್ಳುತ್ತಿವೆ ಹಾಗು ನಿಜವಾದ ವಿಶ್ವಾಸವು ಅವರ ಹೃದಯಗಳಲ್ಲಿ ಬಲವಾಗುತ್ತಿದೆ.
- ಎಲ್ಲ ಸಹೋದರ ಸಹೋದರಿಯರು ಯುಕ್ತ ಚಿಂತನೆ, ಸರಿಯಾದ ತಿಳಿವಳಿಕೆ ಹಾಗು ಪ್ರಾಮಾಣಿಕ ಜೀವನದ ಯತ್ನಗಳನ್ನು ಬೆಳೆಸಿಕೊಳ್ಳುತ್ತಿರುವರು.
- ನಮ್ಮ ಸುತ್ತಲಿನ ಎಲ್ಲವು ದೈವಿಕ ಸ್ಮರಣೆಯಲ್ಲಿ ಆಳವಾಗಿ ತಲ್ಲೀನವಾಗಿದೆ.
- ನಿಜವಾಗಲೂ ಪರಮಪದದ ತೀವ್ರಬಯಕೆಯುಳ್ಳ ಎಲ್ಲ ಸಹೋದರ ಸಹೋದರಿಯರು ನಮ್ಮ ಪರಮಪೂಜ್ಯ ಗುರುಗಳೆಡೆಗೆ ಆಕರ್ಷಿತರಾಗುತ್ತಿದ್ದಾರೆ. ಅವರೆಡೆಗೆ ಎಲ್ಲರೂ ಸೆಳೆಯಲ್ಪಡುತ್ತಿರುವರು. ನಾವು ನಮ್ಮ ಗುರುಗಳಿಗೆ ಹೀಗೆ ಪ್ರಾರ್ಥನೆ ಸಲ್ಲಿಸೋಣ, "ಎಲ್ಲರೂ ನಿಮ್ಮ ಅನುಗ್ರಹಕ್ಕೆ ಪಾತ್ರರಾಗಲಿ."

ಜನವರಿ 30 ಹಾಗು 31ರಂದು ಮನ್ರೋ ಆಶ್ರಮದಲ್ಲಿ ಗುರುಗಳು ನೀಡಿದ ಭಾಷಣದ ಆಯ್ದ ಭಾಗ. ಸಂಪೂರ್ಣ ಉಪನ್ಯಾಸವು *http://www.sahajmarg.org/literature/online/speeches/newjersey-20150130* ರಲ್ಲಿ ಲಭ್ಯವಿದೆ.



## ಅಮೇರಿಕದಲ್ಲಿ ಭಂಡಾರ

ಉತ್ತರ ಅಮೇರಿಕದ ಅಭ್ಯಾಸಿಗಳು ಶ್ರೀ ರಾಮಚಂದ್ರ ಮಿಷನ್ನಿನ ಅಧ್ಯಕ್ಷ ಹಾಗು ಆಧ್ಯಾತ್ಮಿಕ ಗುರುವಾಗಿ ನೂತನ ಪಾತ್ರವಹಿಸಿಕೊಂಡಿರುವ ಕಮಲೇಶ್‌ಜಿಯವರೊಂದಿಗೆ ಕಳೆಯುವ ಅವಕಾಶ ಪಡೆದುದಕ್ಕೆ ಸಂಭ್ರಮಿಸಿದರು. ನ್ಯೂಜೆರ್ಸಿಯಲ್ಲಿ ಬಸಂತಪಂಚಮಿಯಂದು, ಪೂರ್ವಸಿದ್ಧತೆಯಿಲ್ಲದ ಭಂಡಾರವು ಖಂಡದಾದ್ಯಂತ 1100 ಅಭ್ಯಾಸಿಗಳ ಹಾಜರಾತಿಯೊಂದಿಗೆ ಉತ್ತರ ಅಮೇರಿಕದ ಸಭೆಯಾಗಿ ಪರಿವರ್ತಿತಗೊಂಡಿತು. ಐವತ್ತು ಸಮರ್ಪಿತ ಸ್ವಯಂಸೇವಕರು ಒಗ್ಗೂಡಿ ಸೂಕ್ತ ವ್ಯವಸ್ಥೆ ಕಲ್ಪಿಸಿದರು.

ಸಭೆಯು ಒಂದು ಹೋಟೆಲಿನಲ್ಲಿ ನಡೆಯಿತು, ಅದು ಮೂರು ದಿನಗಳ ಕಾಲ ಆಶ್ರಮದಂತೆ ಮಾರ್ಪಾಡುಗೊಂಡಿದ್ದಿತು. ಅದರ ವಿಶಾಲವಾದ ನೃತ್ಯಮಂದಿರವು, ಸುಂದರ ಧ್ಯಾನಮಂದಿರವಾಯಿತು. ಕಮಲೇಶ್‌ಜಿಯವರಲ್ಲದೆ ಅನೇಕ ಪರವೂರಿನ ಅಭ್ಯಾಸಿಗಳು ಸಹ ಅಲ್ಲಿ ವಾಸ್ತವ್ಯ ಹೂಡಿದ್ದರು.

ಶುಕ್ರವಾರ ಸಂಜೆ, ಸಭೆಯು 5 ಗಂಟೆಯ ಸತ್ಸಂಗದೊಡನೆ ಪ್ರಾರಂಭವಾಯಿತು ಹಾಗು ನಂತರ ಕಮಲೇಶ್‌ಜಿಯವರು ತಮ್ಮ ಗುರುಗಳಾದ ಚಾರೀಜಿಯವರ ಕುರಿತು ಹೃದಯಸ್ಪರ್ಶಿಯಾಗಿ ಮಾತನಾಡುತ್ತ ಶ್ರದ್ಧಾಪೂರ್ಣ ಸಾಧನೆಯ ತುರ್ತುಅಗತ್ಯದ ಬಗೆಗೆ ಹೇಳಿದರು. ಚಾರೀಜಿಯವರು ತಮ್ಮ ದಿನಚರಿಗಳಲ್ಲಿ ಅತಿ ನಿಷ್ಪಕ್ಷಪಾತವಾಗಿ ಬರೆದಿರುವರೆಂದು ಹೇಳಿದರು ಹಾಗು ಅಭ್ಯಾಸಿಗಳು ವಿಶೇಷತಃ ತಮ್ಮ ಬಗ್ಗೆ ಸಂಪೂರ್ಣ ಪ್ರಾಮಾಣಿಕವಾಗಿರಬೇಕೆಂದು ಹೇಳಿದರು. ಉಪನ್ಯಾಸವನ್ನು ಮುಕ್ತಾಯಗೊಳಿಸುತ್ತ ಅವರು ಶುಕ್ರವಾರದ 9 ಗಂಟೆಯ ಬೈಠಕಿಗೆ ಎಲ್ಲ ಅಭ್ಯಾಸಿಗಳನ್ನು ಆಹ್ವಾನಿಸಿದರು.

ಶನಿವಾರ, ಬಸಂತಪಂಚಮಿಯಂದು, ಸಂಜೆ 7.15ಕ್ಕೆ ಕಮಲೇಶ್‌ಜಿಯವರು ಸ್ಕೈಪ್ ಮುಖಾಂತರ ಟೊರೊಂಟೊ ಆಶ್ರಮವನ್ನು ಉದ್ಘಾಟಿಸಿದರು ಹಾಗು ಕೆನಡಾ ಹಾಗು ಅಮೇರಿಕದ ಇನ್ನೂರು ಅಭ್ಯಾಸಿಗಳು ಹಾಜರಿದ್ದ ಸಭೆಯನ್ನುದ್ದೇಶಿಸಿ ಮಾತನಾಡಿ ನಂತರ ಅದ್ಭುತವಾದ ಬೈಠಕನ್ನು ನೀಡಿದರು.

9 ಗಂಟೆಯ ಸತ್ಸಂಗ ಹಾಗು ಮತ್ತೊಂದು ಲಘು ಭಾಷಣದ ನಂತರ, ಕಮಲೇಶ್‌ಜಿಯವರು ಅನೇಕ ಗಂಟೆಗಳ ಕಾಲ ನೋಂದಣಿಸ್ಥಳದಲ್ಲಿ ಕುಳಿತು, ವರ್ಷಾಂತ್ಯದಲ್ಲಿ ಬರಲಿರುವ ಲಾಲಾಜಿಯವರ ಜೀವನದ ಆಧಾರಿತ ಪುಸ್ತಕವೊಂದರ ಪೂರ್ವ–ನೋಂದಣಿ ಆದೇಶಗಳನ್ನು ಪಡೆದರು ಹಾಗು ಅಭ್ಯಾಸಿಗಳೊಡನೆ ನೇರ, ಪ್ರೇಮಪೂರ್ವಕ ಮತ್ತು ಹಾಸ್ಯಭರಿತ ಸಂಭಾಷಣೆ ನಡೆಸಿದರು. ಅವರು ನಂತರ ಉತ್ತರ ಅಮೇರಿಕದ ಸುಮಾರು 150 ಪ್ರಶಿಕ್ಷಕರನ್ನು ಭೇಟಿಮಾಡಿ, ಗುರುಪರಂಪರೆಯು ಅನುಮತಿ ನೀಡಿರುವ ಹಾಗು ಇತ್ತೀಚಿನ ದಿವ್ಯಲೋಕದ ಸಂದೇಶಗಳು ಸೂಚಿಸಿದ, ಮಿಷನ್ನಿನಲ್ಲಿನ ಬದಲಾವಣೆಗಳನ್ನು ಚರ್ಚಿಸಿದರು.



ಶ್ರೀ ರಾಮಚಂದ್ರ ಮಿಷನ್® ಎಖೋಸ್ ಇಂಡಿಯಾ ವಾರ್ತಾಪತ್ರ



ಬದಲಾಗುತ್ತಿರುವ ಇಂದಿನ ಸಮಯದಲ್ಲಿ ಉತ್ಕಾಂಕ್ಷಿಗಳನ್ನು ತಲುಪಲು ಹಾಗು ಧ್ಯಾನ ಮಾಡಿ, ಜರುಗುವ ಬದಲಾವಣೆಗಳ ಅನುಭವಗಳನ್ನು ಪಡೆಯುವಂತೆ ಅವರನ್ನು ಉತ್ತೇಜಿಸಲು ಸರಳ ಮಾರ್ಗದ ಅಗತ್ಯವಿದೆ ಎಂದು ಹೇಳಿದರು. ಅವರು ಉಪಸ್ಥಿತ ಎಲ್ಲ ಪ್ರಶಿಕ್ಷಕರಿಗೆ ಬೈಠಕನ್ನು ನೀಡಿದರು. ನಂತರ ನವೀನ ಅಭ್ಯಾಸಿಗಳನ್ನು ಭೇಟಿ ಮಾಡಿದರು. 9 ಗಂಟೆಯ ಸತ್ಸಂಗದೊಡನೆ ದಿನವು ಮುಕ್ತಾಯಗೊಂಡಿತು.

ಭಾನುವಾರದಂದು ಮುಂಜಾನೆಯ ಸತ್ಸಂಗದ ನಂತರ ಕಮಲೇಶ್‌ಜಿಯವರು ಪ್ರಶ್ನೋತ್ತರ ಸಭೆಯನ್ನು ನಡೆಸಿದರು. ನೂತನ ಗುರುಗಳು ಹಾಗು ಅಭ್ಯಾಸಿಗಳ ಪಾರಸ್ಪರಿಕ ಹೃದಯಗಳ ಬಂಧವನ್ನು ಕಾಣಬಹುದಾಗಿದ್ದಿತು. ಅಲ್ಲಿ ಪ್ರೇಮ, ಹಾಸ್ಯ, ಸಹನೆ, ಆನಂದ ಹಾಗು ಗಾಢ ಸಾಧನೆಯೊಡನೆ ಅಂತರ್ಗತಗೊಳಿಸುವಿಕೆ ಮತ್ತು ವಿಚಾರದ ಮೂಲಕ ಗುರುಗಳೊಡನೆ ನಿರಂತರ ಸಂಪರ್ಕವು ಇದ್ದಿತು. ಸಭೆಯು ಮುಂದುವರೆದಂತೆ, ಅನೇಕ ಜನರು ಕಮಲೇಶ್‌ಜಿಯವರನ್ನು ಚಾರೀಜಿಯವರ ಪೂರ್ಣ ಪ್ರತಿಬಿಂಬದಂತೆ ಕಂಡರು ಹಾಗು ಸಭೆಯು ಮುಕ್ತಾಯಗೊಳ್ಳುತ್ತಿದ್ದಂತೆ ಅವರು ಭಾವೋದ್ವೇಗದಿಂದ ಕಣ್ಣೀರಿಟ್ಟರು. ಒಬ್ಬ ಅಭ್ಯಾಸಿಯು ಹೇಳಿದರು, "ನಾನದನ್ನು ಹೃದಯದಾಳದಿಂದ ಬಲ್ಲೆ. ಅವರು ಸತ್ಯವಾಗಿ ಒಂದಾಗಿರುವರು."

ಸಭಾಸ್ಥಳದಿಂದ ಹೊರಟು ಕಮಲೇಶ್‌ಜಿಯವರು ಸ್ಥಳೀಯ ಸ್ವಯಂಸೇವಕರೊಡನೆ ಸಮೀಪದ ಮನ್ರೋ ಆಶ್ರಮಕ್ಕೆ ಭೇಟಿ ನೀಡಿದರು. ಅವರು ಅಲ್ಲಿ ಒಂದು ಬೈಠಕನ್ನು ನೀಡಿ, ಅವರೊಂದಿಗೆ ಭೋಜನ ಮಾಡಿ ತಮ್ಮ ಸ್ವಗೃಹಕ್ಕೆ ತೆರಳಿದರು.



## ಸಹಜ ಸಂದೇಶದ ಸಾರ

**ಫೆಬ್ರುವರಿ 12, 2015**

ಅಮೆರಿಕದ ನ್ಯೂಜರ್ಸಿಯಲ್ಲಿ ನಡೆದ ಎರಡು ವಿಚಾರಗೋಷ್ಠಿಗಳು ಅದ್ಭುತವಾಗಿದ್ದುವು – ಒಂದು, 23ರಿಂದ 25 ಜನವರಿ ಹಾಗು ಎರಡನೆಯದು 1ರಿಂದ 3 ಫೆಬ್ರುವರಿ. ಎರಡೂ ಸಂದರ್ಭಗಳು ಬಹಳ ವಿಶೇಷವಾಗಿದ್ದುವು. ನನ್ನ ಪ್ರಯಾಣವು 27 ಜನವರಿಯಂದು ನಿಗದಿಯಾಗಿದ್ದರೂ, ಕಾರಣವಶಾತ್ ನನಗೆ ಹೊರಡಲಾಗಲಿಲ್ಲ. ನಂತರ ನಾನು ನನ್ನ ಪ್ರಯಾಣವನ್ನು ಫೆಬ್ರುವರಿ 4ರಂದು ಯೋಜಿಸಿದೆನು, ಆದರೆ ಅದು ಸಹ 'ಫ್ಲೂ'ವಿನ ಕಾರಣದಿಂದ ರದ್ದಾಯಿತು.

ಅದೃಷ್ಟವಶಾತ್ ನನ್ನ ಆರೋಗ್ಯವು ಸಾಕಷ್ಟು ಸುಧಾರಣೆಗೊಂಡು, 9 ಫೆಬ್ರುವರಿಯಂದು ಹೊರಡುವಂತಾಯಿತು ಹಾಗು ಫೆಬ್ರುವರಿ 10ರ ರಾತ್ರಿ ಮಣಪಾಕ್ಕಂನ್ನು ತಲುಪಿದೆನು.

ನ್ಯೂಜೆರ್ಸಿಯ ಎರಡೂ ಸಭೆಗಳ ಸಮಯದಂದು, ನಾವು ನಮ್ಮ ಸಾಧನೆಯ ಅನೇಕ ಅಂಶಗಳನ್ನು ಚರ್ಚಿಸಿದೆವು, ಅದೀಗ ಸಹಜಸಂದೇಶದ ಮೂಲಕ ಲಭ್ಯವಾಗಲಿದೆ. ಪ್ರಾರ್ಥನಾಮಯ ಸೂಚನೆಗಳ ಅಳವಡಿಕೆಯು ನಮ್ಮ ಮಗ್ನತೆಯನ್ನು ಗಾಢಗೊಳಿಸಲಿದೆ ಹಾಗು ಈ ಪ್ರಾರ್ಥನಾಮಯ ಸೂಚನೆಗಳನ್ನು ಸ್ವೀಕರಿಸಿದವನು ಖಂಡಿತವಾಗಿಯು ಸಕಾರಾತ್ಮಕ ಪರಿವರ್ತನೆಗಳನ್ನು ಕಾಣುವನೆಂದು ನನಗೆ ಭರವಸೆಯಿದೆ.

ಪ್ರಸ್ತುತ ಬಾಬೂಜಿ ಸ್ಮಾರಕ ಆಶ್ರಮದಲ್ಲಿ, ನಮ್ಮಲ್ಲಿ ಇಪ್ಪತ್ತೈದು ISAW ಅಭ್ಯರ್ಥಿಗಳು ತಮ್ಮ ಪ್ರದೇಶಗಳಲ್ಲಿ ಪ್ರಶಿಕ್ಷಕರಾಗಿ ಕಾರ್ಯನಿರ್ವಹಿಸುವ ತರಬೇತಿ ಪಡೆಯುತ್ತಿರುವರು. ಈ ಕಾರ್ಯಕ್ರಮವು ಫೆಬ್ರುವರಿ 15ರಂದು ಮುಕ್ತಾಯಗೊಳ್ಳಲಿದೆ. ಮೇಲಾಗಿ, ನಮ್ಮಲ್ಲಿ ದಕ್ಷಿಣ ಅಮೆರಿಕಾದ 100 ಕ್ಕೂ ಮಿಗಿಲಾದ ಭಾಗಿಗಳಿರುವರು ಹಾಗು ಅವರಿಗಾಗಿ ವಿಶೇಷ ಕಾರ್ಯಕ್ರಮವು ಫೆಬ್ರುವರಿ 14ರವರೆಗೆ ನಡೆಯಲಿದೆ.

ಪ್ರೇಮ ಮತ್ತು ಆಶೀರ್ವಾದಗಳಿಗಾಗಿ ಗುರುಗಳಲ್ಲಿ ಪ್ರಾರ್ಥನೆಯೊಂದಿಗೆ

ಕಮಲೇಶ್ ಡಿ. ಪಟೇಲ್

"...ಹಾಗಾಗಿ ಕೊನೆಯಲ್ಲಿ ನಿಮ್ಮೊಂದಿಗೆ ನಾನು ಹಂಚಿಕೊಳ್ಳಬಯಸುವ ಸಣ್ಣ ವಿಷಯವೊಂದೇ. ಗುರುಗಳೊಂದಿಗೆ ಒಂದೇ ವಾಹಿನಿ, ಒಂದು ಸಂಪರ್ಕವನ್ನು ಇರಿಸಿಕೊಳ್ಳಿರಿ, ಅಷ್ಟು ಸಾಕು. ಉಳಿದೆಲ್ಲ ಸಂಗತಿಗಳು ಈ ವಾಹಿನಿಯನ್ನು ಬಲಗೊಳಿಸಲು ಹಾಗು ಬೆಂಬಲಕ್ಕಾಗಿ ಇರುವುವು. ಉಳಿದುದೆಲ್ಲವು ನನ್ನ ಪ್ರಯತ್ನಗಳ ಬಲಗುಂದಿಸುವುವು ಅಥವ ಗುರುಗಳೊಂದಿಗಿನ ನನ್ನ ಸಂಪರ್ಕವನ್ನು ನಿಶ್ಶಕ್ತಗೊಳಿಸುವುವು, ಅವುಗಳನ್ನು ನಿಲ್ಲಿಸುವುದೆ ವಿವೇಕ ಹಾಗು ಅದನ್ನು ಗುರುತಿಸಲು ನಾನು ಸಂಗತಿಗಳನ್ನು ಸರಿಯಾಗಿ ವಿವೇಚಿಸುವಂತಾಗಬೇಕು.

–ಕಮಲೇಶ್‌ಜಿ

ಫೆಬ್ರುವರಿ 2,2015, ಮನ್ರೋ ಆಶ್ರಮ

# ಪೂಜ್ಯ ಲಾಲಾಜಿ ಮಹಾರಾಜರ 142ನೇ ಜನ್ಮದಿನೋತ್ಸವ

ಪೂಜ್ಯ ಲಾಲಾಜಿ ಮಹಾರಾಜರ 142ನೇ ಜನ್ಮ ದಿನಾಚರಣೆಯನ್ನು ವಿಕೇಂದ್ರೀಕರಿಸಿ ಭಾರತದ ಎಲ್ಲ ಆಶ್ರಮಗಳಲ್ಲಿಯೂ ಮೂರು ದಿನದ ಭಂಡಾರವಾಗಿ ಆಚರಿಸಲಾಯಿತು. ಚಳಿಗಾಲದ ಕೊರೆಯುವ ಚಳಿಯಲ್ಲಿಯೂ ಸಹ ಈ ಶುಭ ಸಂದರ್ಭವನ್ನು ಆಚರಿಸಲು ಸುತ್ತಮುತ್ತಲಿನ ಅಭ್ಯಾಸಿಗಳು ದೊಡ್ಡ ಮೊತ್ತದಲ್ಲಿ ತಮ್ಮ ಹತ್ತಿರದ ಆಶ್ರಮಗಳಲ್ಲಿ ಸೇರಿದ್ದರು. ಈ ಸಮಯದಲ್ಲಿ ಆಶ್ರಮಗಳು ಸಂಭ್ರಮದಿಂದ ಕೂಡಿದ ವಿವಿಧ ಚಟುವಟಿಕೆಗಳನ್ನು ಒಳಗೊಂಡಿದ್ದುವು. ಲಾಲಾಜಿ ಮಹಾರಾಜರ ಜೀವನ ಮತ್ತು ಅವರ ಉಪದೇಶಗಳು, ಸಂಭಾಷಣೆಯ ನಿಯಮಗಳು, ಚಾರಿತ್ರ್ಯ ನಿರ್ಮಾಣ, ಆತ್ಮಶೋಧನೆ ಹೀಗೆ ಹಲವಾರು ವಿಷಯಗಳ ಕುರಿತು ಭಾಷಣವಿತ್ತು. ಮಕ್ಕಳು ಹಾಗು ಯುವಕರೂ ಸಹ ಸಕ್ರಿಯವಾಗಿ ಭಾಗವಹಿಸಿದ್ದು, ಲಾಲಾಜಿಯವರ ಜೀವನದ ಕುರಿತು ಪ್ರಹಸನಗಳನ್ನು, ಹಾಡುಗಳು ಮತ್ತು ನೃತ್ಯಗಳನ್ನು ಮಾಡುವುದರ ಮೂಲಕ ಈ ಸಂದರ್ಭವನ್ನು ಮತ್ತಷ್ಟು ವರ್ಣಮಯ ಹಾಗು ಚಿರಸ್ಮರಣೀಯವಾಗಿ ಮಾಡಿದರು. ಈ ಭಂಡಾರವು ಅಲ್ಲಿದ್ದ ಪ್ರತಿಯೊಬ್ಬರಿಗೂ ಗುರುಗಳ ದೈವೀಕೃಪೆಯನ್ನು ಆನಂದಿಸುವಂತಹ ಅವಕಾಶ ದೊರಕಿತು. ವಿವಿಧ ಕೇಂದ್ರಗಳಲ್ಲಿ ನಡೆದ ಆಚರಣೆಯ ಕುರಿತು ನಮ್ಮ ಎಖೋಸ್ ತಂಡಕ್ಕೆ ಅನೇಕ ವರದಿ ತಲುಪಿತು. ಇಂತಹ ಕೇಂದ್ರಗಳಿಂದ ಪಡೆದ ಕೆಲ ಛಾಯಾಚಿತ್ರಗಳನ್ನು ಕೆಳಗೆ ತೋರಿಸಲಾಗಿದೆ:


ಅಲಹಾಬಾದ್


ಭುವನೇಶ್ವರ್


ಜೋಧ್‌ಪುರ್


ಈರೋಡ್


ಗಾಜಿಯಾಬಾದ್


ಕೋಲ್ಕಾತಾ


ಜೈಪುರ


ಸೋನೆಪತ್


ಪಯ್ಯನೂರು


ಖರಗ್ಪುರ


ಹುಬ್ಬಳ್ಳಿ


ವಡೋದರ


ಮೀರತ್


ಲಖನೌ


ಮದುರೈ


ದೆಹಲಿ


ತಿರುಪ್ಪೂರು

## ಯು–ಕನೆಕ್ಟ್ ಕಾರ್ಯಕ್ರಮಗಳು

ನಮ್ಮ ಮಿಷನ್ನಿನ ಯು–ಕನೆಕ್ಟ್ ಕಾರ್ಯಕ್ರಮಗಳ ಅಡಿಯಲ್ಲಿ ಪ್ರಾರಂಭವಾದ ಆತ್ಮವಿಕಾಸದ ಕಾರ್ಯಕ್ರಮಗಳು, ಭಾರತದ ಎಲ್ಲೆಡೆ ಹಾಗು ಪ್ರಪಂಚದ ಇತರೆಡೆ ವ್ಯಾಪಿಸುತ್ತಿದೆ. ಇತ್ತೀಚಿನ ಹೊಸ ಸೂಚನೆಗಳು ಹಾಗು ಕಾರ್ಯವಿಧಾನಗಳ ಪರಿಚಯದಿಂದ, ತಮ್ಮನ್ನು ಗುರುಗಳ ಕೆಲಸದಲ್ಲಿ ತೊಡಗಿಸಿಕೊಳ್ಳಲು ಹಾಗು ಭಾಗವಹಿಸಲು ಅವಕಾಶಗಳು ಮತ್ತಷ್ಟು ವಿಸ್ತಾರಗೊಂಡಿದೆ.

ಈ ವಿಸ್ತೃತ ಅವಕಾಶಗಳ ಮೂಲಕ, ಹಲವು ಬದಲಾವಣೆಗಳು ಕಾರ್ಯಗತಗೊಳ್ಳಲಿವೆ. ಆದ್ದರಿಂದ ಯು–ಕನೆಕ್ಟ್ ಸಂಯೋಜಕರು, ಸಹಾಯಕರು ಮತ್ತು ಸ್ವಯಂಸೇವಕರು ಸದ್ಯದ ಸಮಾಚಾರಗಳನ್ನು ಶೇಖರಿಸಿಟ್ಟುಕೊಳ್ಳಬೇಕಾಗಿ ಅವರಲ್ಲಿ ವಿನಂತಿಸುತ್ತೇವೆ.

ಯು–ಕನೆಕ್ಟ್ ಸಂಸ್ಥೆಯು 15 ಪ್ರಾಂತಗಳಾಗಿ ವಿಭಜನೆಯಾಗಿದ್ದು, ಅದು ತನ್ನ ಪ್ರಾಂತದ ಸಂಯೋಜಕರು ಅವರ ಕೇಂದ್ರಕ್ಕೆ ಸಂಬಂಧಿಸಿದ ZIC ಮತ್ತು CIC ರ ಜೊತೆಗೂಡಿ ಕೆಲಸ ಮಾಡುತ್ತಾರೆ. ಯು–ಕನೆಕ್ಟ್‌ನ ಸಹಾಯಕ ತಂಡವೊಂದನ್ನು ಮಣಪಾಕ್ಕಂನಲ್ಲಿ ತರಬೇತಿ ಹಾಗು ನಿರಂತರ ಸುಧಾರಣೆಯ ಸಲುವಾಗಿ ರಚಿಸಲಾಗಿದೆ. ನಾವು ಪ್ರಸ್ತುತ ಇದರ ಮಾಹಿತಿಗಳನ್ನು ಹಿಂದಿ ಭಾಷೆಗೆ ಅನುವಾದಿಸುತ್ತಿದ್ದೇವೆ.

ಈ ಕೆಲಸದಲ್ಲಿ ಭಾಗವಹಿಸಲು ಈ ಕೆಳಗಿನ ವಿಳಾಸದ ಮೂಲಕ ಚಂದಾದಾರರಾಗಬಹುದು http:/www.sahajmarg.org/resources/programs/uconnect ಕೆಲ ತಿಂಗಳುಗಳ ಹಿಂದೆ ಹಲವಾರು ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಅದರ ಮುಖ್ಯಾಂಶಗಳನ್ನು ಕೆಳಗೆ ನೀಡಲಾಗಿದೆ.

ಗುಜರಾತಿನ ಸೂರತ್‌ನಲ್ಲಿ, ಎರಡು ವರ್ಷಗಳ ಹಿಂದೆ ನಾವು ಮೊದಲ ಯು–ಕನೆಕ್ಟ್ ಕಾರ್ಯಕ್ರಮವನ್ನು ಯುಕ ತರ್‌ಸಾಡಿಯಾ ವಿಶ್ವವಿದ್ಯಾಲಯದ ಮಲಿಬಾ ಆವರಣದಲ್ಲಿ ಪ್ರಾರಂಭಿಸಿದೆವು. ಮೊದಲ ಆತ್ಮವಿಕಸನ (ಎಸ್‌ಡಿಪಿ)ದ ಕಾರ್ಯಕ್ರಮವು 250 ಅಧ್ಯಾಪಕ ವರ್ಗದವರಿಗಾಗಿ ನಡೆಸಲಾಯಿತು. ಇಲ್ಲಿಯವರೆಗೆ 100 ಅಧ್ಯಾಪಕ ವರ್ಗದವರು ವ್ಯವಸ್ಥಿತ ಧ್ಯಾನದ ಅಭ್ಯಾಸವನ್ನು ಪ್ರಾರಂಭಿಸಿದ್ದಾರೆ. ಅವರಲ್ಲಿ 30–40 ಮಂದಿ ಶನಿವಾರ ಮಧ್ಯಾಹ್ನದ ಸತ್ಸಂಗಗಳಲ್ಲಿ ಪಾಲ್ಗೊಳ್ಳುತ್ತಾರೆ. ಈ ಎರಡು ವರ್ಷಗಳ ಅವಧಿಯಲ್ಲಿ ಆತ್ಮವಿಕಸನದ (ಎಸ್‌ಡಿಪಿ) ಕಾರ್ಯಕ್ರಮಗಳನ್ನು 8 ಕಾಲೇಜುಗಳಲ್ಲಿ ನಡೆಸಲಾಗಿದೆ. ಸುಮಾರು 350 ವಿದ್ಯಾರ್ಥಿಗಳನ್ನು ಸಹಜ ಮಾರ್ಗಕ್ಕೆ ಪರಿಚಯಿಸಲಾಗಿದೆ. ವಿದ್ಯಾರ್ಥಿಗಳಿಗಾಗಿ ಸತ್ಸಂಗವನ್ನು ವಾರದ ದಿನಗಳಂದು ಸಣ್ಣ ಗುಂಪುಗಳಾಗಿ ನಡೆಸಲಾಗುತ್ತದೆ. ಧ್ಯಾನಮಂದಿರಕ್ಕಾಗಿ ಒಂದು ಸ್ಥಳ ಒದಗಿಸುವುದಾಗಿ ವಿಶ್ವವಿದ್ಯಾನಿಲಯದವರು ಭರವಸೆ ನೀಡಿದ್ದು ಅದರಂತೆಯೆ 17ನೇ ಜನವರಿ 2015ರಂದು ಮೊದಲು ಧ್ಯಾನಕೇಂದ್ರದ ಉದ್ಘಾಟನೆ ಮಾಡಲಾಯಿತು. ಅಭ್ಯಾಸಿಗಳು ಅದರಲ್ಲಿ ಒಂದು ವಾಚನಾಲಯವನ್ನು ಸಹ ನಿರ್ಮಿಸುತ್ತಿದ್ದಾರೆ. ಇತ್ತೀಚೆಗೆ ಎಸ್‌ಹೆಚ್‌ಪಿಟಿಯು ಕೆಲ ಪುಸ್ತಕಗಳನ್ನು ಈ ವಾಚನಾಲಯಕ್ಕೆ ದಾನವಾಗಿ ನೀಡಿದೆ.


ಸಿಲಿಗುರಿ

ಮಹಾರಾಷ್ಟ್ರದ ಪೂಣೆಯಲ್ಲಿನ, ಇಂಡಿಯನ್ ರೈಲ್ವೆ ಆಫೀಸರ್ಸ್, ಇಂಡಿಯನ್ ರೈಲ್ವೆ ಇನ್‌ಸ್ಟಿಟ್ಯೂಟ್ ಆಫ್ ಸಿವಿಲ್ ಇಂಜನಿಯರಿಂಗ್, ಪೂಣೆ, ಇವರಿಗಾಗಿ ಜನವರಿ 1ರಂದು ಒಂದು ದಿನದ ವಿಶೇಷ ಕಾರ್ಯಾಗಾರವನ್ನು ನಡೆಸಲಾಯಿತು. ಈ ಕಾರ್ಯಾಗಾರವನ್ನು ಸಹೋದರ ಹರ್ಷಲ್ ಜವಾಲೆಯವರು ನಡೆಸಿದ್ದು, ಜೀವನದ ಮೌಲ್ಯಗಳು ಮತ್ತು ನೈತಿಕತೆ ಇವರ ವಿಷಯವಾಗಿತ್ತು.

ಮಧ್ಯಪ್ರದೇಶದ ವಿದಿಶದಲ್ಲಿ, ಯು–ಕನೆಕ್ಟ್ ತಂಡವು ಸರ್ಕಾರಿ ಬಾಲಕಿಯರ ಕಾಲೇಜಿನಲ್ಲಿ ಜನವರಿ 18ರಂದು ಆತ್ಮವಿಕಸನದ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು, ಅದರಲ್ಲಿ 100 ವಿದ್ಯಾರ್ಥಿನಿಯರು ಹಾಗು 10 ಶಿಕ್ಷಕವರ್ಗದವರು ಪಾಲ್ಗೊಂಡರು.

ಇಂತಹ ಹಲವಾರು ಕಾರ್ಯಕ್ರಮಗಳು ಚಂಡಿಗಡ, ಹರಿಯಾಣ, ತಮಿಳುನಾಡು, ಇಂದೋರ್, ರಾಜಸ್ಥಾನ, ಸಿಕ್ಕಿಂನಲ್ಲಿ ನಡೆಯುತ್ತಿವೆ. ಕೆಲವು ವಲಯಗಳು ಯು–ಕನೆಕ್ಟ್ ಶಿಕ್ಷಕ ತರಬೇತಿ ಕಾರ್ಯಕ್ರಮಗಳನ್ನೂ ಹೊಂದಿವೆ.



ಮಾಲಿಬಾ


ವಿದಿಷ

# ಅಖಿಲ ಭಾರತ ಪ್ರಬಂಧ ಸ್ಪರ್ಧೆ 2014

ಈ ಸಂದರ್ಭವು ಶ್ರೀರಾಮಚಂದ್ರ ಮಿಷನ್ ಹಾಗು ಯುನೈಟೆಡ್ ನೇಷನ್ಸ್ ಇನ್‌ಫರ್ಮೇಷನ್ ಸೆಂಟರ್ (UNIC)ಭಾರತ ಹಾಗು ಭೂತಾನ್ ಸಹಭಾಗಿತ್ವದಲ್ಲಿ ಆಯೋಜಿಸಿಲಾದ ಅಂತರ್ರಾಷ್ಟ್ರೀಯ ಯುವಕರ ದಿನಾಚರಣೆಯ ಸ್ಮಾರಕವಾಗಿ ನಡೆಯುತ್ತಿರುವ ಅಖಿಲ ಭಾರತ ಪ್ರಬಂಧ ಸ್ಪರ್ಧೆಯು ತನ್ನ ಹತ್ತನೇ ವರ್ಷವನ್ನು ತಲುಪಿದೆ. ಮೊದಲ ವರ್ಗ (9ರಿಂದ 12ನೇ ತರಗತಿಯ ವಿದ್ಯಾರ್ಥಿಗಳು)ದವರ ಪ್ರಬಂಧದ ವಿಷಯ ಶೇಕ್ಸ್‌ಪಿಯರ್‌ನ ಒಂದು ಉಲ್ಲೇಖ "ದಿಸ್ ಎಬವ್ ಆಲ್: ಟು ದೈನ್ ಓನ್ ಸೆಲ್ಫ್ ಬಿ ಟ್ರು"(ನಿಮ್ಮೊಂದಿಗೆ ಪ್ರಾಮಾಣಿಕರಾಗಿರುವುದೆ ಎಲ್ಲಕ್ಕಿಂತ ಮಿಗಿಲು) ಎರಡನೇ ವರ್ಗ (ಪದವಿಪೂರ್ವ ಹಾಗು ಸ್ನಾತಕೋತ್ತರ ವಿದ್ಯಾರ್ಥಿ)ದವರ ವಿಷಯ: "ಮಾನವೀಯತೆಯನ್ನು ಹೊಂದಿದರೆ ಸತ್ಯವಂತರಾದಂತೆ". ಎರಡು ವಿಭಾಗದಲ್ಲಿ ಭಾಗವಹಿಸುವವರು ತಮ್ಮ ವಿಷಯಗಳ ಬಗ್ಗೆ ಮುಕ್ತರಾಗಿ ಚರ್ಚಿಸಬಹುದಾಗಿದ್ದು, ಕೊನೆಯಲ್ಲಿ ಅಸಲು ಪ್ರತಿಯನ್ನು ತಮ್ಮ ಬರವಣಿಗೆಯಲ್ಲಿಯೆ ನಿವೇದಿಸತಕ್ಕದ್ದು. ಇಚ್ಛೆಯಿರುವ ಸಂಸ್ಥೆಗಳನ್ನು ಹಾಗು ವಿದ್ಯಾರ್ಥಿಗಳನ್ನು ಆಹ್ವಾನಿಸಿದ್ದು ಭಾಗವಹಿಕೆಯ ಸಂಖ್ಯೆಯ ಬಗ್ಗೆ ನಮಗೆ ಗಮನವಿಲ್ಲದಿದ್ದರೂ ಇಲ್ಲಿ ಭಾಗವಹಿಸುವವರ ಸಂಖ್ಯೆ ದಿನೇ ದಿನೇ ಏರುತ್ತಿದೆ. ಈ ವರ್ಷ 1,64,475 ವಿದ್ಯಾರ್ಥಿಗಳು 9,841 ಶಾಲೆಗಳಿಂದ ಮೊದಲ ವರ್ಗದಲ್ಲಿ ಹಾಗು 2016 ಸಂಸ್ಥೆಗಳಿಂದ 21,276 ಕಾಲೇಜು ವಿದ್ಯಾರ್ಥಿಗಳು, ಒಟ್ಟಾಗಿ 1,85,751 ಮಂದಿ 11,857 ವಿದ್ಯಾಸಂಸ್ಥೆಗಳಿಂದ ಭಾಗವಹಿಸಿದ್ದರು.

ಪ್ರಪ್ರಥಮವಾಗಿ ಎರಡೂ ವಿಭಾಗದಲ್ಲಿಯೂ ಮೊದಲ ಬಹುಮಾನಗಳನ್ನು ಒಂದೇ ಭಾಷೆ–ತೆಲುಗು ಭಾಷೆಗೆ ದೊರಕಿದ್ದು, ಎಸ್. ದಿಯಾ ನಿಸ್ಸಿ, 10ನೇ ತರಗತಿ, ಗುಡ್ ಶೆಪರ್ಡ್ ಆಂಗ್ಲ ಮಾಧ್ಯಮ ಶಾಲೆ, ನಂದ್ಯಾಲ ಮತ್ತು ತಾಡಿ ಸುಜಯ್ ಕಿರಣ್ ಎಂಬಿಬಿಎಸ್ ಅಂತಿಮ ವರ್ಷ, ರಾಜೀವ ಗಾಂಧಿ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಶ್ರೀಕಾಕುಳಂ ಈ ವಿದ್ಯಾರ್ಥಿಗಳು ಬಹುಮಾನ ಪಡೆದಿದ್ದಾರೆ.

ಈ ಇಬ್ಬರು ವಿಜೇತರ ಪ್ರಬಂಧಗಳನ್ನು SRCMನ ವೆಬ್‌ಸೈಟ್: www.sahajmarg.org/essay-event ನಲ್ಲಿ ತೋರಲಾಗಿದೆ. ಇತರೆ ವಿಜೇತರ ಪ್ರಬಂಧಗಳನ್ನೂ ಇದರೊಂದಿಗೆ ಹಾಕಲಾಗಿದೆ. ಈ ಹಿಂದಿನಂತೆಯೆ ಬಹುಮಾನ ವಿತರಣೆಯನ್ನು ಮಿಷನ್ನಿನ ತಮ್ಮ ತಮ್ಮ ಕೇಂದ್ರಗಳಲ್ಲಿಯೆ ಪೋಷಕರ ಹಾಗು ಅಧ್ಯಾಪಕರ ಸಮ್ಮುಖದಲ್ಲಿ ನಡೆಯಿತು. ಇವರೆಲ್ಲರಿಗೂ ನಮ್ಮ ಮಿಷನ್ನಿನ ಬಗ್ಗೆ ತಿಳಿದುಕೊಳ್ಳುವ ಒಂದು ಅವಕಾಶವನ್ನು ನೀಡಲಾಯಿತು.


ಜೋಧ್‌ಪುರ್


ತಿರುಪ್ಪೂರು


ಪಾಲಿ


ಲಖನೌ


ಕೋಲ್ಕತಾ



ಪಾಟ್ನಾ


ತಿರುಚಿರಾಪಳ್ಳಿ



ಮೈಸೂರು

ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ

# ಅಖಿಲ ಭಾರತ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣಾ ಕಾರ್ಯಕ್ರಮ


ಅಲಹಾಬಾದ್


ಬಿಕನೇರ್


ಬಿಜ್ನೂರ್



ಶ್ರೀಗಂಗಾನಗರ



ಉಜ್ಜಯಿನಿ


ಔರಂಗಾಬಾದ್


ಪೈಠಣ್


ಕೋವಿಲಪಟ್ಟಿ


ಬಸವಕಲ್ಯಾಣ


ವಲ್ಲಿಯೂರು


ಹುಬ್ಬಳ್ಳಿ


ಆಲುವ


ಗುಲ್ಬರ್ಗ


ಲಾಲ್ಪಾನಿಯ


ಮದುರೈ


ಉತ್ತರಪರವೂರು


ಸೀತಾಪುರ್


ಪಾಲಕ್ಕಾಡ್


ಮುಂಬೈ


ಸಿಲಿಗುರಿ


ತಿರುಚೆಂದೂರ್



ರಾಂಚಿ





# ಯುವ ಕಾರ್ಯಕ್ರಮಗಳು

## ವಿಶಾಖಪಟ್ಟಣಂ, ಆಂಧ್ರಪ್ರದೇಶ

ಜನವರಿ 17 ರಂದು, ವಿಶಾಖಪಟ್ಟಣಂ ಕೇಂದ್ರವು 50 ಯುವಕರಿಗಾಗಿ 'ಒಗ್ಗೂಡಿ ಬೆಳೆಯೋಣ' ಎಂಬ ಪ್ರಾಂತೀಯ ಕಾರ್ಯಾಗಾರ ಏರ್ಪಡಿಸಿತ್ತು. ಸೋದರ ಆದಿನಾರಾಯಣ (ZIC AP1B) ರವರು ಯುವಕರಿಗೆ ಅಹಂಕಾರದಿಂದ ಸಂಪೂರ್ಣ ಮುಕ್ತರಾಗಲು ಮತ್ತು ಪ್ರೇಮವನ್ನು ಬೆಳೆಸುವಲ್ಲಿ ಸೇವೆಯ ಪ್ರಾಮುಖ್ಯತೆ ಬಗ್ಗೆ ಸಲಹೆ ನೀಡಿ, ಸಾಧನೆಯಲ್ಲಿ ಕ್ರಮಬದ್ಧವಾಗಿರಲು ಪ್ರೇರೇಪಿಸಿದರು.

ಶಿಬಿರಾರ್ಥಿಗಳು ಮಾತುಗಳನ್ನು, ಪ್ರದರ್ಶಿಕೆಗಳನ್ನು ಮತ್ತು ಯುವಕರಿಗೆ ಸಂಬಂಧಿಸಿದ ಪಿಸುಮಾತಿನ ಸಂದೇಶಗಳನ್ನು ಆಲಿಸಿದರು. ತಂಡ–ಬೆಳೆಸುವ ಕುತೂಹಲಕಾರಿ ಚಟುವಟಿಕೆಯೊಂದರಲ್ಲಿ, ಯುವಕರು ತಂಡಗಳನ್ನು ರಚಿಸಿ, ವಹಿಸಿದ ಕಾರ್ಯವನ್ನು ಚೆನ್ನಾಗಿ ಪೂರ್ಣಗೊಳಿಸಿದರು. ಭೋಜನದ ಬಳಿಕ ಮಧ್ಯಾಹ್ನ 3.30 ರವರೆಗೆ ವಿಶ್ವವ್ಯಾಪಿ ವೆಬಿನಾರ್ ಆಯೋಜಿಸಲಾಗಿದ್ದುದು ಕಾಕತಾಳೀಯವಾಗಿತ್ತು. ಈ ಕಾರ್ಯಕ್ರಮವು ವಿಶ್ವಾದ್ಯಂತ ಅಭ್ಯಾಸಿಗಳು ಹೇಗೆ ವಿಕಾಸಕ್ಕೆ ಅವಶ್ಯವಾದ ಸದ್ಗುಣಗಳನ್ನು ಬೆಳೆಸಿಕೊಳ್ಳುತ್ತಿರುವುದನ್ನು ತಿಳಿಯುವಲ್ಲಿ ಕುತೂಹಲವನ್ನುಂಟುಮಾಡಿತ್ತು. ಕಾರ್ಯಕ್ರಮವು ಸಂಜೆಯ ಸತ್ಸಂಗದೊಡನೆ ಕೊನೆಯಾಯಿತು. ಸೋದರ ಸಪ್ತಮುಕುಲು, ಶಿಬಿರಾರ್ಥಿಗಳನ್ನು ಮುಂದಿನ ಆರು ತಿಂಗಳಲ್ಲಿ ನಡೆಸುವ ಯುವ ಕಾರ್ಯಾಗಾರಕ್ಕೆ ಆಹ್ವಾನಿಸಿದರು.

## ಹಲ್ದ್ವಾನಿ ಆಶ್ರಮ, ಉತ್ತರಾಖಂಡ

'ಪರಿಶುದ್ಧತೆ ಗುರಿಯನ್ನು ನೇಯುತ್ತದೆ' ಎಂಬ ಕಾರ್ಯಾಗಾರವನ್ನು ಹಲ್ದ್ವಾನಿ ಆಶ್ರಮದಲ್ಲಿ ಜನವರಿ 24 ರಿಂದ 26 ರವರೆಗೆ ಈ ಭಾಗದ ಯುವಕರಿಗಾಗಿ ಆಯೋಜಿಸಲಾಗಿತ್ತು. ಸುಂದರವಾಗಿ ಸಿಂಗರಿಸಲಾದ ಆಶ್ರಮದ ಹಬ್ಬದ ವಾತಾವರಣದಲ್ಲಿ ಕಾರ್ಯಾಗಾರ ಪ್ರಾರಂಭವಾಯಿತು, ಮತ್ತು 24ರ ಸಂಜೆ ಶಿಬಿರಾಗ್ನಿ ಇತ್ತು. 25ರ ಮುಂಜಾನೆ, ಸೋದರ ಬಿ.ಎಸ್. ಚುಪಾಲ್ (ZIC), ರವರು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಹೆಸರಾಂತ ನಿಸರ್ಗ ಛಾಯಾಗ್ರಾಹಕ ಹಾಗು ಪರ್ವತಾರೋಹಿ ಶ್ರೀ. ಅನೂಪ್ ಶಾ ರವರಿಂದ ಹವ್ಯಾಸಿ ಕಾರ್ಯಾಗಾರವನ್ನು ಭೋಜನದ ಬಳಿಕ ಏರ್ಪಡಿಸಿತ್ತು. ಈ ಕಾರ್ಯಾಗಾರದಲ್ಲಿ, ಯಾವುದೇ ಕೆಲಸದಲ್ಲಿ ಬದ್ಧತೆ, ಪ್ರೇಮ, ಉದ್ದೇಶದ ತೀವ್ರತೆ, ದೈನಂದಿನ ಸಾಧನೆ, ಸಾಧನೆಯಲ್ಲಿ ಮುಂದುವರೆದಂತೆಲ್ಲ ವ್ಯಕ್ತಿಗತ ನಡವಳಿಕೆಯಲ್ಲಿನ ವಿವಿಧ ಬದಲಾವಣೆ ಮತ್ತು ವ್ಯಕ್ತಿತ್ವದ ಬೆಳವಣಿಗೆ ಬಗ್ಗೆ ಒತ್ತು ನೀಡಲಾಯಿತು. ಈ ಆಶ್ರಮದ ನಿರ್ಮಾಣದ ವಿಡಿಯೊ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಂತ ಕಬೀರರ ಜೀವನ ಆಧರಿಸಿದ ನಾಟಕವನ್ನು ಪ್ರದರ್ಶಿಸಲಾಯಿತು. ನಂತರ ಪ್ರಶ್ನೋತ್ತರ ಕಾರ್ಯಕ್ರಮವು ನಡೆಯಿತು. ಜನವರಿ 26 ರಂದು ಧ್ವಜಾರೋಹಣ, ಸಮಾರೋಪ ಭಾಷಣ, ಅವಲೋಕನ, ಮತ್ತು ಮುಂಬರುವ ದಿನಗಳ ಕಾರ್ಯಕ್ರಮಗಳಿಗೆ ಸಲಹೆ–ಸೂಚನೆಗಳ ವಿನಿಮಯ ನಡೆಯಿತು.

## ಕರ್ನಾಟಕದ ಕೋಲಾರ ಆಶ್ರಮಕ್ಕೆ ಭೇಟಿ

ಫೆಬ್ರವರಿ 8 ರಂದು ಇಪ್ಪತ್ತೊಂದು ಯುವಕರು ಬನಶಂಕರಿ ಆಶ್ರಮದಿಂದ ಕೋಲಾರ ಆಶ್ರಮಕ್ಕೆ ಪ್ರಯಾಣಿಸಿದರು. ಇದಲ್ಲದೆ ಹತ್ತು ಜನ ಕೋಲಾರ ಆಶ್ರಮವನ್ನು ಪ್ರತಿನಿಧಿಸಿದರು ಮತ್ತು ಕುಪ್ಪಂ ಕೇಂದ್ರದ ತಂಡದವರು ಕೂಡ ಚಟುವಟಿಕೆಗಳಲ್ಲಿ ಭಾಗಿಯಾದರು.

ಮಂಜು ಒಡೆಯುವ ಆಟದ ಬಳಿಕ ಶಿಬಿರಾರ್ಥಿಗಳು ರಾಮಚಂದ್ರ ಮಿಷನ್ನಿಗೆ ಸಂಬಂಧಿಸಿದ ಪದಬಂಧ ಬಿಡಿಸುವ ತಂಡಗಳಾಗಿ ಬೇರ್ಪಟ್ಟರು. ಗುರಿ ಕುರಿತ ಆತ್ಮಾವಲೋಕನದ ಅವಧಿ ಮತ್ತು ಯುವಕರು ತಮ್ಮ ಗುರಿ ಸಾಧನೆಯಲ್ಲಿ ಮಾಡಿಕೊಳ್ಳಬೇಕಾದ ಮಾರ್ಪಾಡುಗಳ ಬಗ್ಗೆ ತಿಳಿಸಲಾಯಿತು. ಇತ್ತೀಚೆಗೆ ಪೂಜ್ಯ ಕಮಲೇಶ್ ರವರು ನೀಡಿದ ನಾಲ್ಕು ಸಲಹೆಗಳನ್ನು ಹೇಗೆ ಅಭ್ಯಾಸ ಮಾಡಬೇಕೆನ್ನುವ ಬಗ್ಗೆ ತಿಳಿಸಲಾಯಿತು. ಸಾಧನೆಯಲ್ಲಿ ಮುಂದುವರೆಯಲು ಮಿಷನ್ನಿನ ಮೂಲ ವಿಷಯಗಳ ಕುರಿತ ಅರಿವಿನ ನಿಧಿ ಬೇಟೆ ನಡೆಸಲಾಯಿತು. ಭೋಜನದ ಬಳಿಕ ತಂಡವು ಸ್ಥಳೀಯ ಅಭ್ಯಾಸಿಗಳ ಪ್ರೇಮಾದರಗಳಿಂದ, ಆಶ್ರಮದಲ್ಲಿ ಕಳೆದ ಸಮಯದಿಂದ ಹರ್ಷಿತರಾಗಿ ಬೆಂಗಳೂರಿಗೆ ತೆರಳಿತು.





## ಚಳಿಗಾಲದ ಶಿಬಿರ, ಅಹಮದಾಬಾದ್, ಗುಜರಾತ್

ಜನವರಿ 24 ರಿಂದ 26 ರವರೆಗೆ ಮಕ್ಕಳಿಗಾಗಿ ಮೂರು ದಿನಗಳ ಶಿಬಿರವನ್ನು ಅಹಮಾದಾಬಾದಿನ ಅಡಲಾಜ್ ಯೋಗಾಶ್ರಮದಲ್ಲಿ ಆಯೋಜಿಸಲಾಗಿತ್ತು. 24 ರಂದು ಸ್ವಾಗತ ಭಾಷಣದ ಬಳಿಕ, ಮಕ್ಕಳು 'ಬೇರೆಯವರಿಗೆ ಸಂತೋಷ ನೀಡಿ, ನೀವು ನಿಮ್ಮ ಸಂತೋಷವನ್ನು ಪಡೆಯುತ್ತೀರಿ' ಎಂಬ ಸಂದೇಶ' ಸಾರುವ 'ಖುಷಿ' ಎಂಬ ಆಟವಾಡುವ ಮೂಲಕ ಪರಸ್ಪರ ಪರಿಚಯಿಸಿಕೊಂಡರು. ನಂತರ ಮಕ್ಕಳಿಗೆ ಈರುಳ್ಳಿ ಗಡ್ಡೆ ಬಿತ್ತುವುದನ್ನು ಕಲಿಸಲಾಯಿತು. ರಸಪ್ರಶ್ನೆ ಕಾರ್ಯಕ್ರಮ ಮತ್ತು ಲಘು-ಕುಶಲ ಕಲಿಕಾ ಕಾರ್ಯಕ್ರಮ ನಡೆಸಲಾಯಿತು. ಆತ್ಮ ರಕ್ಷಣೆ, ಆರೋಗ್ಯಪೂರ್ಣ ಆಹಾರ ಸೇವನೆ ಮತ್ತು ಸದಾ ಆರೋಗ್ಯದಿಂದಿರಲು ಸಲಹೆಗಳ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಊಟದ ಬಳಿಕ ಮಕ್ಕಳು ಶಿಬಿರಾಗ್ನಿ ಸುತ್ತ ಹಾಡಿ ಕುಣಿದು ಹರ್ಷಿಸಿದರು. ಮಾರನೆ ದಿನ ಮಕ್ಕಳನ್ನು ವಿಕ್ರಂ ಸಾರಾಭಾಯಿ ಸಮುದಾಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಸಂಜೆ, ಆಶ್ರಮಕ್ಕೆ ಹಿಂದಿರುಗಿದ ಬಳಿಕ, ಮಕ್ಕಳು ಕೆಲವು ಆಟಗಳನ್ನಾಡಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಜನವರಿ 26 ರಂದು, ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಧ್ವಜಾರೋಹಣ, ರಾಷ್ಟ್ರ ಗೀತೆ, ದೇಶಭಕ್ತಿಗೀತೆ, ಕ್ರೀಡೆ, ಆಟಗಳು ನಡೆದು, ಪ್ರಶಸ್ತಿ ವಿತರಣೆ ನಡೆಯಿತು. ಭೋಜನದ ನಂತರ, ಶಿಬಿರ ಕೊನೆಯಾಯಿತು. ಮಕ್ಕಳು ಸ್ನೇಹಿತರನ್ನು ಗಳಿಸಿದರು, ಹೊಸ ಕೌಶಲ್ಯ ಪಡೆದರು, ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು ಮತ್ತು ಖುಷಿ ಪಟ್ಟರು.

## ವಾರ್ಷಿಕೋತ್ಸವ, ಕೋಲ್ಕತ್ತ

ಕೋಲ್ಕತ್ತದಲ್ಲಿನ ಬಾಬೂಜಿ ಸ್ಮಾರಕ ಆಶ್ರಮವನ್ನು 24 ಡಿಸೆಂಬರ್ 2003 ರಲ್ಲಿ ಚಾರೀಜಿ ಮಹಾರಾಜರು ಉದ್ಘಾಟಿಸಿದರು. ಈ ದಿನವನ್ನು ವಾರ್ಷಿಕೋತ್ಸವವನ್ನಾಗಿ ಬಹಳ ವರ್ಷಗಳಿಂದ ಈ ಕೇಂದ್ರವು, ವಿಶೇಷವಾಗಿ ಮಕ್ಕಳಿಗಾಗಿ ಕ್ರೀಡೆಗಳನ್ನು ನಡೆಸಿ ಸಂತೋಷೋಲ್ಲಾಸಗಳ ದಿನವನ್ನಾಗಿ ಆಚರಿಸಿಕೊಂಡು ಬರುತ್ತಿದೆ. ಇದನ್ನು ಈ ವರ್ಷ ಜನವರಿ 18 ರಂದು ಆಚರಿಸಲಾಯಿತು.

ಮಕ್ಕಳ ಮತ್ತು ಯುವ ಕೇಂದ್ರದ (CYC) ಸ್ವಯಂಸೇವಕರು 32 ಆಟೋಟಗಳನ್ನು ವಯೋಮಾನಕ್ಕನುಗುಣವಾಗಿ ಸಂಯೋಜಿಸಿದ್ದರು. ಯುವಕರು ಮತ್ತು ವೃದ್ಧರು ವಿವಿಧ ಆಟಗಳಲ್ಲಿ ಭಾಗವಹಿಸಿದರೆ, ವಯೋವೃದ್ಧ ಅಭ್ಯಾಸಿಗಳು ಕೂಡ ಓಟವಿಲ್ಲದ ಆಟಗಳನ್ನಾಡಿ ಸಂತೋಷಿಸಿದರು. ಬಹುತೇಕ ಕ್ರೀಡೆಗಳು ಅಭ್ಯಾಸಿಗಳ ಸಾಧನೆಗೆ, ಸದ್ಗುಣಗಳು ಮತ್ತು ಮೌಲ್ಯಗಳ ಅಭಿವೃದ್ಧಿಗೆ ಪೂರಕವಾಗುವಂತೆ ವಿನ್ಯಾಸಗೊಳಿಸಲಾಗಿತ್ತು. ಪ್ರತಿಯೊಬ್ಬರೂ ದಿನವಿಡೀ ಆಶ್ರಮದ ಪವಿತ್ರ ವಾತಾವರಣದಲ್ಲಿ ಸೋದರಭಾವ ಮತ್ತು ಪ್ರೇಮದೊಡನೆ ಪರಸ್ಪರ ಉತ್ತೇಜನಗೊಳಿಸುವುದರ ಜೊತೆಗೆ ತಮ್ಮಲ್ಲಿನ ಅತ್ಯುತ್ತಮವನ್ನು ನೀಡುವ ಪ್ರಯತ್ನದಲ್ಲಿ ಕಳೆಯುವ ದಿನವಾಗಿತ್ತು.

## ಪ್ರಾಂತೀಯ ಸಭೆ, ಹರ್ಯಾಣ

ಸೋನ್‌ಪತ್ ಆಶ್ರಮದಲ್ಲಿ ಫೆಬ್ರವರಿ 8 ರಂದು ಡಾ. ಸತ್ಯ ಎನ್ ಮಂಡಲ್ ರವರು (ZIC Zone-21) ಪ್ರಾಂತೀಯ ಸಭೆಯೊಂದನ್ನು ಕರೆದಿದ್ದರು. ಅದರಲ್ಲಿ 37 ಪ್ರಶಿಕ್ಷ'ಕರು, ಸಂಚಾಲಕರು, ಆಯೋಜಕರು, ಸ್ವಯಂಸೇವಕರು ಮತ್ತು ಕೇಂದ್ರಗಳ ಮುಖ್ಯರು ಹಾಜರಿದ್ದರು. ಪ್ರಾಂತೀಯ ಮುಖ್ಯರು, ಸಂಚಾಲಕರು ಮತ್ತು ವಿಶಿಷ್ಟ ಪ್ರದೇಶಗಳ ಪ್ರಶಿಕ್ಷಕರು 2014 ರಲ್ಲಿ ಎದುರಾದ ತೊಂದರೆಗಳನ್ನೊಳಗೊಂಡಂತೆ ತಮ್ಮ ತಮ್ಮ ಪ್ರಾಂತ, ಕೇಂದ್ರ, ಪ್ರದೇಶಗಳಲ್ಲಿನ ಚಟುವಟಿಕೆಗಳ ಹಾಗು ಬೆಳವಣಿಗೆಗಳ ವಿಸ್ತೃತ ವರದಿಯನ್ನು ಮಾಡಿದರು. ಹಾಜರಿದ್ದ ಎಲ್ಲ ಅಭ್ಯಾಸಿ ಸೋದರಿ ಸೋದರರು ಗುರುಗಳು ಅತಿ ಶೀಘ್ರದಲ್ಲಿಯೆ ನಿರ್ಮಾಣವಾಗಲಿರುವ ಪಾಣಿಪತ್ ಮತ್ತು ರೋಟಕ್ ನಲ್ಲಿ ಆಶ್ರಮ ನಿರ್ಮಾಣಕ್ಕೆ ಅನುಮತಿ ನೀಡಿರುವುದನ್ನು ತಿಳಿದು ಅತ್ಯಂತ ಸಂತೋಷ ಹೊಂದಿದರು. ಪ್ರತಿ ಪ್ರದೇಶದ ಸ್ಥಳೀಯ ಅಡಚಣೆಗಳು ಮತ್ತು ಅದರಿಂದ ಹೊರಬರುವ ವ್ಯವಸ್ಥೆ ಕುರಿತು ಚರ್ಚಿಸಲಾಯಿತು. ಎಲ್ಲ 37 ಸಭಿಕರು ಕಳೆದ ವರ್ಷದ ಚಟುವಟಿಕೆಗಳ ವಿವರ ನೀಡಿದರು. ಪ್ರಾಂತದಲ್ಲಿನ ಯು-ಕನೆಕ್ಟ್ ಚಟುವಟಿಕೆಗಳ ಬಗ್ಗೆ ಕಿರು ಪ್ರದರ್ಶನವನ್ನು ತೋರಿಸಲಾಯಿತು.



# ಸುದ್ದಿ ತುಣುಕುಗಳು

## ಜೈಪುರ, ತೆಲಂಗಾಣ



ಮುವ್ವತ್ತೈದು ಅಭ್ಯಾಸಿಗಳು ಜೈಪುರ ಆಶ್ರಮದಲ್ಲಿ ಜನವರಿ 10 ಮತ್ತು 11 ರಂದು ಏರ್ಪಡಿಸಿದ್ದ ಎರಡು ದಿನಗಳ ಆತ್ಮಾವಲೋಕನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. 'ಗುರುಗಳ ದರ್ಶನದ ವಿನಿಮಯ' ಮತ್ತು 'ಗುರುಗಳ ದರ್ಶನವನ್ನು ಈಡೇರಿಸುವುದು' ಎಂಬ ವಿಷಯಗಳನ್ನು ಈ ಕಾರ್ಯಕ್ರಮದಲ್ಲಿ ಅಳವಡಿಸಲಾಗಿತ್ತು. ಗುರುಗಳ ಇತ್ತೀಚಿನ ಭಾಷಣಗಳ ಮುಖ್ಯಾಂಶಗಳನ್ನು ಪ್ರದರ್ಶಿಸಲಾಯಿತು. ಮಣಪ್ಪಾಕ್ಕಂನಲ್ಲಿ ನವೆಂಬರ್ ತಿಂಗಳಿನಲ್ಲಿ ಜರುಗಿದ ಅಖಿಲ ಭಾರತ ಯುವ ಕಾರ್ಯಾಗಾರದ ಮಹತ್ವದ ಅಂಶಗಳನ್ನು ಮತ್ತು ಭಾಗವಹಿಸಿದವರ ಅನುಭವಗಳನ್ನು ಕೂಡ ಹಂಚಿಕೊಳ್ಳಲಾಯಿತು.



## ತಿರುಪ್ಪೂರು, ತಮಿಳುನಾಡು

ಚೆಟ್ಟಿಪಾಳ್ಯಂ ಆಶ್ರಮದಲ್ಲಿ ಜನವರಿ 25 ರಂದು ಹತ್ತು ನಿಯಮಗಳ ಬಗ್ಗೆ ಒಂದು ದಿನದ ಕಾರ್ಯಕ್ರಮವನ್ನು ಹಿಂದಿ ಭಾಷೆಯಲ್ಲಿ ಏರ್ಪಡಿಸಲಾಗಿತ್ತು. 47 ಮಂದಿ ಅಭ್ಯಾಸಿಗಳು ಇದರಲ್ಲಿ ಭಾಗವಹಿಸಿದ್ದರು. ಇದೇ ವಿಷಯದ ಬಗ್ಗೆ ಜನವರಿ 26 ಮತ್ತು 27 ರಂದು ತಿರುಪ್ಪೂರು, ಶೋಲಾವಂದನ ಮತ್ತು ಬೆಂಗಳೂರಿನಲ್ಲಿ ಆಂಗ್ಲ ಭಾಷೆಯಲ್ಲಿ ಏರ್ಪಡಿಸಲಾಗಿತ್ತು. 57 ಜನರು ಇದರಲ್ಲಿ ಭಾಗವಹಿಸಿದ್ದರು. ಪ್ರತಿ ನಿಯಮವನ್ನು ಸಮಗ್ರವಾಗಿ ಚರ್ಚಿಸಲಾಯಿತು. ಪ್ರತಿ ಸಂಜೆ ಪ್ರಶ್ನೋತ್ತರ ಮತ್ತು ಅನುಭವಗಳ ವಿನಿಮಯ ನಡೆಯಿತು. ದೈನಂದಿನ ಜೀವನದಲ್ಲಿ ಹತ್ತು ನಿಯಮಗಳ ಬಗ್ಗೆ ಎದುರಾಗುವ ಅನುಮಾನಗಳನ್ನು ಈ ಸಭೆಯಲ್ಲಿ ಪರಿಹರಿಸಲಾಯಿತು.

## ಚಿಕ್ಕಮಗಳೂರು, ಕರ್ನಾಟಕ



ಭಾನುವಾರ ಜನವರಿ 11 ರಂದು ಅಭ್ಯಾಸಿ ಕುಟುಂಬ–ಕೂಟವನ್ನು ಚಿಕ್ಕಮಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಎಲ್ಲ ಅಭ್ಯಾಸಿಗಳು ತಮ್ಮ ತಮ್ಮ ಕುಟುಂಬದೊಡನೆ ಸಂಭ್ರಮೋಲ್ಲಾಸದೊಂದಿಗೆ ಆಯೋಜಿಸಿದ್ದ ಆಟೋಟಗಳಲ್ಲಿ ಭಾಗವಹಿಸಿದರು. ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು.

## ಗುಲ್ಬರ್ಗ, ಕರ್ನಾಟಕ



ಜನವರಿ 13 ರಂದು ಅಪ್ಪಾ ಪಬ್ಲಿಕ್ ಶಾಲೆಯಲ್ಲಿ ನಮ್ಮ ಸಮಾಜದ ಯುವಕರ ಇಂದಿನ ಸ್ಥಿತಿಗತಿಗಳು ಮತ್ತು ಅವುಗಳನ್ನು ಉತ್ತಮಪಡಿಸಲು ಯುವಕರ ಪಾತ್ರದ ಅರಿವುಂಟುಮಾಡಿಕೊಡುವ ಸಲುವಾಗಿ ರಾಷ್ಟ್ರೀಯ ಯುವ ದಿನ ಆಚರಿಸಲಾಯಿತು. ಡಾ. ಗಜೇಂದ್ರ ಸಿಂಗ್ (ZIC, Zone 4A) ಮತ್ತು ಸೋದರ ಶ್ರೀಕಾಂತ್ ಜೋಷಿಯವರನ್ನು ಅತಿಥಿಗಳನ್ನಾಗಿ ಆಹ್ವಾನಿಸಲಾಗಿತ್ತು. ಹೃದಯವೆ, ಪ್ರೇಮ ಮತ್ತು ಸ್ಫೂರ್ತಿಯ ಮೂಲವಾಗಿರುವ ಕಾರಣ ಯುವಕರೆಲ್ಲರು ತಂತಮ್ಮ ಜೀವನದ ಎಲ್ಲ ಸನ್ನಿವೇಶಗಳಲ್ಲಿ ತಮ್ಮ ಹೃದಯವನ್ನು ಆಲಿಸುವಂತೆ ಡಾ. ಗಜೇಂದ್ರಸಿಂಗ್ ರವರು ಯುವಕರಿಗೆ ಸೂಚಿಸಿದರು. ಈ ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

# ಮುಕ್ತ ಸಭೆಗಳು

## ಸಿರಸಿ, ಉತ್ತರ ಕನ್ನಡ



ಜನವರಿ 24 ರಂದು ಫಾರೆಸ್ಟ್ ಕಾಲೇಜಿನಲ್ಲಿ ನಡೆಸಲಾದ ಸಭೆಯಲ್ಲಿ ಕಾಲೇಜಿನ 50 ಆಸಕ್ತ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು. ಅವರಲ್ಲಿ 21 ಮಂದಿ ಪ್ರಾರಂಭಿಕ ಬೈಠಕ್ಕು ಪಡೆದರು. ತೋಟಗಾರಿಕೆ ಕಾಲೇಜಿನಲ್ಲಿ ನಡೆದ ಸಭೆಯಲ್ಲಿ 16 ಮಂದಿ ಆಸಕ್ತರು ಅಭ್ಯಾಸ ಆರಂಭಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು.



## ಖರಗಪುರ, ಪಶ್ಚಿಮ ಬಂಗಾಳ

ಜನವರಿ 25 ರಂದು ನಡೆದ ಸಭೆಯ ಕೊನೆಯಲ್ಲಿ 60 ಮಂದಿ ಭಾಗವಹಿಸಿದ್ದವರಲ್ಲಿ 30 ಮಂದಿ ತಾವೂ ಅಭ್ಯಾಸ ಪ್ರಾರಂಭಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು.

## ಮೌಲ್ಯ ಶಿಕ್ಷಣ ಕಾರ್ಯಕ್ರಮ

2014–15 ರ ಶೈಕ್ಷಣಿಕ ವರ್ಷದಲ್ಲಿ ಮೌಲ್ಯ ಶಿಕ್ಷಣ ಕಾರ್ಯಕ್ರಮ ಎಂಬ ನೂತನ ಯೋಜನೆಯನ್ನು 8 ಕೇಂದ್ರಗಳ 15 ಶಾಲೆಗಳಲ್ಲಿ ಋಊಔ ವತಿಯಿಂದ ಉದ್ಘಾಟಿಸಲ್ಪಟ್ಟಿತು. ಮುಂದಿನ ವರ್ಷಗಳಲ್ಲಿ ಹೆಚ್ಚು ಹೆಚ್ಚು ಕೇಂದ್ರ ಮತ್ತು ಶಾಲೆಗಳಲ್ಲಿ ಈ ಕಾರ್ಯಕ್ರಮವನ್ನು ಆರಂಭಿಸುವ ಅನುಭವ ಸ್ಫೂರ್ತಿದಾಯಕವಾಗಿತ್ತು. ಪ್ರತಿಕ್ರಿಯೆಗಳನ್ನು ಆಧರಿಸಿ ಪಠ್ಯಕ್ರಮವನ್ನು ಉತ್ತಮಪಡಿಸಲಾಗುವುದು ಮತ್ತು ಭಾಗವಹಿಸುವ ಎಲ್ಲಾ ಕೇಂದ್ರ ಮತ್ತು ಶಾಲೆಗಳಿಗೆ ಸೂಕ್ತ ತರಬೇತಿ ನೀಡಲಾಗುವುದು. ನಿಮ್ಮ ಪ್ರದೇಶಗಳಲ್ಲಿ ಸ್ವಯಂಸೇವಕರಾಗಿ ಮೌಲ್ಯ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸಲು http://www.sahajmarg.org/resources/programs/values-education. ಗೆ ದಯಮಾಡಿ ಭೇಟಿ ನೀಡಿ.

## ತಿರುಚಿ ಕೇಂದ್ರ, ತಮಿಳುನಾಡು.



2014–15 ರ ಶೈಕ್ಷಣಿಕ ವರ್ಷದಲ್ಲಿ ಶ್ರೀ ಶಿವಾನಂದ ಬಾಲಾಲಯ ಶಾಲೆಯಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಮೌಲ್ಯ ಶಿಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಆರಂಭಿಕ ಅಧಿವೇಶನ 3 ಜೂನ್ 2014 ರಿಂದ ಪ್ರಾರಂಭಗೊಂಡಿತು. ಕಥೆ, ಚಟುವಟಿಕೆಗಳು ಮತ್ತು ವಿಡಿಯೊ ಪ್ರದರ್ಶನಗಳಿಂದ ಕೂಡಿದ ಕಾರ್ಯಕ್ರಮವಾದ ಕಾರಣದಿಂದ ವಿದ್ಯಾರ್ಥಿಗಳು ತರಗತಿಗಳಿಗೆ ಉತ್ಸಾಹದಿಂದ ಹಾಜರಾದರು. ವಿದ್ಯಾರ್ಥಿಗಳು ಮತ್ತು ಬೋಧಕರಿಬ್ಬರಿಗೂ ಆತ್ಮಾವಲೋಕನ ಸಭೆಗಳು ಜೀವನದ ಕೌಶಲ್ಯಗಳನ್ನು ಉತ್ತಮ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಸಹಕಾರಿಯಾದವು. ವ್ಯಕ್ತಿತ್ವ ನಿರ್ಮಾಣದ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಬೋಧಕರಿಗೆ ಸುಂದರ ಅನುಭವವಾಯಿತು. 7 ಜನವರಿ 2015 ರಂದು ಈ ಕಾರ್ಯಕ್ರಮದ ಸಮಾರೋಪ ನಡೆಯಿತು. ಕಾರ್ಯಕ್ರಮದ ನಂತರ ಮುಂದಿನ ಶೈಕ್ಷಣಿಕ ವರ್ಷದಲ್ಲೂ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಸಿದ್ಧರಾದ, ಸಕಾರಾತ್ಮಕ ಬದಲಾವಣೆಯನ್ನು ಅನುಭವಿಸಿದ, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಅತ್ಯಂತ ಸಂತೋಷ ಹೊಂದಿದರು.

## ಹೊಸ ಪ್ರಕಟಣೆಗಳು




ಹತ್ತು ನಿಯಮಗಳ ವ್ಯಾಖ್ಯಾನ ಬೆಂಗಾಲಿ




ಹತ್ತು ನಿಯಮಗಳ ವ್ಯಾಖ್ಯಾನ ಮತ್ತು ರಾಜಯೋಗದ ಪ್ರಭಾವ ರಷ್ಯನ್–ಶ್ರವ್ಯ–ಪುಸ್ತಕ




ದಿವ್ಯಲೋಕದ ಪಿಸುಮಾತುಗಳು ಸ್ಪಾನಿಷ್–ಶ್ರವ್ಯ–ಪುಸ್ತಕ

ದಿವ್ಯಲೋಕದ ಪಿಸುಮಾತುಗಳು 5ನೆ ಆವೃತ್ತಿ– ಫ್ರೆಂಚ್




### ನಿರಂತರ ಸ್ಮರಣೆ– ಇಂಗ್ಲೀಷ್

ಜನವರಿಯ ಈ ವಿಶೇಷ ಸಂಚಿಕೆ ನಮ್ಮ ಗುರುಗಳ ಜೀವನ ಮತ್ತು ಸಾಧನೆಗಳ ಸಂಸ್ಮರಣಾ ಸಂಚಿಕೆಯಾಗಿದೆ. ಎಲ್ಲ ಚಂದಾದಾರರು ಈ ಪ್ರತಿಯನ್ನು ಪಡೆಯುವರು, ಈ ಸಂಚಿಕೆಯು ಪುಸ್ತಕ ಮಳಿಗೆಯಲ್ಲಿ ಮಾರಾಟಕ್ಕೆ ಮತ್ತು ಕಾರ್ಪಸ್ ವಿಭಾಗದಲ್ಲಿ ದೊರೆಯುವುದು.

### ಸೂಚನೆ

ಪೂಜ್ಯ ಬಾಬೂಜಿಯವರ ಜನ್ಮ ದಿನದ ಕಾರ್ಯಕ್ರಮಗಳು, 29 ಏಪ್ರಿಲ್ ನಿಂದ 1 ಮೇ 2015 ರವರೆಗೆ ಲಖನೌ, ಉತ್ತರ ಪ್ರದೇಶದಲ್ಲಿ ನಡೆಯುವುದು..

ಪೂಜ್ಯ ಚಾರೀಜಿ ಮಹಾರಾಜರ ಜನ್ಮ ದಿನದ ಕಾರ್ಯಕ್ರಮಗಳು 23 ಜುಲೈನಿಂದ 25 ಜುಲೈ 2015 ರವರೆಗೆ ತಿರುವಳ್ಳೂರು, ತಮಿಳುನಾಡಿನಲ್ಲಿ ಜರುಗುವುದು.

ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ

## ಲಯ ಯೋಗ ಆಶ್ರಮ, ವಾರಾಣಸಿ, ಉತ್ತರ ಪ್ರದೇಶ

## ಪ್ರಭಾಕೇಂದ್ರ





1989ರಲ್ಲಿ ಭಾನುವಾರದ ಸತ್ಸಂಗ ವಾರಣಾಸಿಯಲ್ಲಿ ಪ್ರಾರಂಭವಾಯಿತು. 1989 ರಿಂದ 2001 ರವರೆಗೆ ಆಶ್ರಮದ ಜಾಗದಲ್ಲಿ ಒಂದು ತಾತ್ಕಾಲಿಕ ಧ್ಯಾನ ಮಂದಿರ ನಿರ್ಮಾಣವಾಗುವವರೆಗೆ ಸತ್ಸಂಗದ ಸ್ಥಳಗಳು ಬದಲಾಗುತ್ತಲೇ ಇದ್ದವು.

**ಆಶ್ರಮದ ನಿರ್ಮಾಣ**

2001 ರಲ್ಲಿ, ದೆಹಲಿ ಪ್ರವಾಸದಲ್ಲಿ ಗುರುಗಳು ಡಾ. ಪ್ರಸನ್ನ ಕುಮಾರ್ (CIC) ರರಿಗೆ ಸಾರನಾಥದಲ್ಲಿ ಆಶ್ರಮಕ್ಕೊಂದು ಪ್ರತ್ಯೇಕ ಜಾಗವನ್ನು ನೋಡಲು ಹೇಳಿದರು. 5 ಜುಲೈ 2001 ರಂದು 5,438 ಚದರಡಿಯ ಜಾಗವೊಂದನ್ನು ಆಗಿನ CIC ಡಾ.ಪ್ರಸನ್ನ ಕುಮಾರರು ಶ್ರೀ ರಾಮಚಂದ್ರ ಮಿಷನ್ನಿನ ಹೆಸರಿನಲ್ಲಿ ನೋಂದಾಯಿಸಿದರು. 16 ಡಿಸೆಂಬರ್ 2001 ರಂದು ಗುರುಗಳು ವಾರಣಾಸಿಗೆ ಭೇಟಿ ನೀಡಿ ಆಶ್ರಮಕ್ಕೊಂದು ತಾತ್ಕಾಲಿಕ ಧ್ಯಾನ ಮಂದಿರದ ಶಂಕುಸ್ಥಾಪನೆ ನೆರವೇರಿಸಿದರು. 2005 ರಲ್ಲಿ, ನೂತನ ಧ್ಯಾನ ಮಂದಿರ ನಿರ್ಮಾಣದ ಪ್ರಸ್ತಾವನೆಯನ್ನು ಅಂಗೀಕರಿಸಿ, 16 ಫೆಬ್ರವರಿ 2006 ರಂದು ಶಂಕುಸ್ಥಾಪನೆ ನೆರವೇರಿಸಿದರು.

ಆಶ್ರಮದ ವಿನ್ಯಾಸದ ಅಂಗೀಕಾರ ಮತ್ತು ಧನ ಸಂಗ್ರಹಣೆಗೆ ನಾಲ್ಕು ವರ್ಷ ತೆಗೆದುಕೊಂಡಿತು. ಸೋದರ ಯು.ಎಸ್.ಬಾಜಪೇಯಿಯವರ ಸಮ್ಮುಖದಲ್ಲಿ 2 ನವೆಂಬರ 2009 ರಂದು ನೂತನ ಧ್ಯಾನ ಮಂದಿರದ ನಿರ್ಮಾಣ ಕಾರ್ಯ ಆರಂಭಗೊಂಡಿತು. ಶಿಖರದಲ್ಲಿ ಕಮಲವಿರುವ ಅಷ್ಟಕೋನಾಕೃತಿಯ ಧ್ಯಾನ ಮಂದಿರ ಮೇ 2011 ರಲ್ಲಿ ಸಿದ್ಧಗೊಂಡಿತು. 4 ಡಿಸೆಂಬರ್ 2011 ರಂದು ಚೆನ್ನೈನಿಂದ ನೇರವಾಗಿ ವಿಡಿಯೊ ಸಂಪರ್ಕದ ಮೂಲಕ ಧ್ಯಾನ ಮಂದಿರವನ್ನು ಉದ್ಘಾಟಿಸಿ ಸಮರ್ಪಿಸಿದರು. ಸುಮಾರು 1000 ಅಭ್ಯಾಸಿಗಳು ಈ ಪುಣ್ಯ ಸಂದರ್ಭದಲ್ಲಿ ಹಾಜರಿದ್ದರು.

> ಸಹಜಮಾರ್ಗವು ಪ್ರೇಮದ ಮಾರ್ಗ. ನಾವು ಈ ಸ್ಥಳವನ್ನು ನಮ್ಮ ಆಧ್ಯಾತ್ಮಿಕ ಪ್ರಗತಿಗಾಗಿ ಬಳಸಿಕೊಳ್ಳಬೇಕು. ಸಹಜಮಾರ್ಗದಲ್ಲಿ ದ್ವೇಷಕ್ಕೆ ಯಾವುದೆ ಸ್ಥಳವಿಲ್ಲ.
>
> – ಪಾರ್ಥಸರಥಿ ರಾಜಗೋಪಾಲಾಚಾರಿ
>
> ಡಿಸೆಂಬರ್ 2011, ಚೆನ್ನೈ

**ಚಟುವಟಿಕೆಗಳು**

ಪ್ರಾಂತೀಯ ಯುವ ಕಾರ್ಯಾಗಾರಗಳು, (VBSE) ಮೌಲ್ಯಾಧಾರಿತ ಶಿಕ್ಷಣದ ಕಾರ್ಯಾಗಾರಗಳು, GITP ಸಭೆಗಳು, ಇತರೆ, ಈ ಆಶ್ರಮದಲ್ಲಿ ನಡೆಸಲಾಗುತ್ತಿದೆ. ಕಳೆದ ಹತ್ತು ವರ್ಷಗಳಿಂದ ಈ ಕೇಂದ್ರದಲ್ಲಿ ಪ್ರಬಂಧ ಸ್ಪರ್ಧೆ ನಡೆಸಲಾಗುತ್ತಿದೆ.

ಈಗ 1,352 ಅಭ್ಯಾಸಿಗಳು ಈ ಕೇಂದ್ರದಲ್ಲಿದ್ದು ಸುಮಾರು 325 ಅಭ್ಯಾಸಿಗಳು ಭಾನುವಾರದ ಸತ್ಸಂಗಗಳಿಗೆ ಕ್ರಮಬದ್ಧವಾಗಿ ಬರುತ್ತಾರೆ.

ಈ ಆಶ್ರಮದಲ್ಲಿ ದೊರೆಯುವ ಇನ್ನಿತರ ಸೌಲಭ್ಯಗಳೆಂದರೆ ಭೋಜನ ಶಾಲೆ, ಗುರುಗಳ ಕೊಠಡಿ, ಗ್ರಂಥಾಲಯ, ಮಾಹಿತಿ ತಂತ್ರಜ್ಞಾನ ಕೊಠಡಿ, ಲೆಕ್ಕಪತ್ರ ಕಚೇರಿ, GITP ತರಬೇತಿ ಸಭಾಂಗಣ, ಆಶ್ರಮ ಕಚೇರಿ, ಸಮೂಹ ಶಯನಾಗಾರ, ಸುಂದರ ಉದ್ಯಾನ, ಮಕ್ಕಳ ಕೇಂದ್ರ, ಮತ್ತು ಉಸ್ತುವಾರಿ ಕೊಠಡಿ.







To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2015 Shri Ram Chandra Mission ("SRCM"). All rights reserved. “Shri Ram Chandra Mission", "Sahaj Marg", “SRCM”, “Constant Remembrance” and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.